# Government of Karnataka

## Deposition Sheet (R.P.N.57) Form 4 Criminal

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| ಕ್ರಿಮಿನಲ್ ಪ್ರಕರಣ ಸಂಖ್ಯೆ | 14/2025 |
|---|---|

ದಿನಾಂಕ 15-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 1 ಪ್ರಾಸಾಃ 1

| | |
|---|---|
| ಹೆಸರು | ಚಾಂದಪಾಶಾ |
| ತಂದೆಯ ಹೆಸರು | ಅಬ್ದುಲ್ ಗಫೂರ |
| ವಯಸ್ಸು | 38 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ಸರೋಜಿನಿ ಓಣಿ ದೇವದುರ್ಗ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ: -**

ಆರೋಪಿತರು ನನಗೆ ಪರಿಚಯ ಇರುವುದಿಲ್ಲ. ಆರೋಪಿ ಯಾವುದೇ ವಸ್ತುವನ್ನು ಕಳ್ಳತನ ಮಾಡಿರುವುದಿಲ್ಲ. ಸಾಕ್ಷಿ ದೂರಿನಲ್ಲಿರುವ ತನ್ನ ಸಹಿ ನೋಡಿ ಗುರುತಿರುತ್ತಾರೆ ದೂರನ್ನು ನಿ ಪಿ 1 ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು. ನಿ ಪಿ 1 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ದೂರು ನೀಡಿದ ನಂತರ ಪೋಲಿಸರಿಗೆ ಯಾವುದೇ ಸ್ಥಳವನ್ನು ತೋರಿಸಿಲ್ಲ, ನನ್ನ ಸಮಕ್ಷಮ ಯಾವುದೇ ಜಪ್ತಿ ಪಂಚನಾಮೆಯನ್ನು ಮಾಡಿರುವುದಿಲ್ಲ, ಸಾಕ್ಷಿದಾರರು ಜಪ್ತಿ ಪಂಚನಾಮೆಯಲ್ಲಿನ ತನ್ನ ಸಹಿಯನ್ನು ನಿ ಪಿ 2 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆಸಿದ 02 ಛಾಯಾ ಚಿತ್ರಗಳನ್ನು ನಿ ಪಿ 3 ಮತ್ತು 4 ಎಂದು ಗುರುತಿಸಲಾಯಿತು. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಪುರವಣಿ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಪ್ರಾರ್ಥಿಸುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಸ.ಸ.ಅ. ರವರಿಂದ:**

ದಿನಾಂಕ: 21-10-2024 ರಂದು ರಾತ್ರಿ 9-00 ಗಂಟೆಗೆ ಅಂಬೇಡ್ಕರ್ ಸರ್ಕ್‍ಲ್ ಹತ್ತಿರ ಕರ್ನಾಟಕ ಬ್ಯಾಂಕ್ ಪಕ್ಕದಲ್ಲಿ ನನ್ನ ಕರ್ನಾಟಕ ಒನ್ ಕಂಪ್ಯೂಟರ್ ಸೆಂಟರ್ ಅಂಗಡಿಗೆ ಶಟರ್ ಮುಚ್ಚಿ ಅದಕ್ಕೆ ಬೀಗ ಹಾಕಿಕೊಂಡು ಹೋಗಿದ್ದು, ನಂತರ ಮರುದಿನ ದಿನಾಂಕ: 22-10-2024 ರಂದು ಬೆಳಗಿನ ಜಾವ 10-00 ಗಂಟೆಗೆ ನಾನು ಅಂಗಡಿಯ ಶೆಟರ್ ಗೆ ಹಾಕಿದ ಬೀಗವನ್ನು ತೆಗೆದು ಒಳಗೆ ಹೋಗಿ ನೋಡಿದಾಗ, ನನ್ನ ಅಂಗಡಿಯಲ್ಲಿಟ್ಟಿದ್ದ ಸಾಮಾನುಗಳು ಚಲ್ಲಾಪಿಲ್ಲಿಯಾಗಿದ್ದವು ನಾನು ಮೇಲೆ ನೋಡಲು ಪಾನ್ ಶಾಪ್ ಅಂಗಡಿಯ ಮೇಲೆ ಹಾಕಿದ ಟಿನ್ ಶೆಡ್ ಕಿತ್ತಿ ತೆಗೆದು ಹಾಕಿದ್ದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಅಂಗಡಿಯಲ್ಲಿ ಇಟ್ಟಿದ್ದ 8 ಸಾವಿರ ರೂ ನಗದು ಹಣ ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಹುಡುಕಾಡಿ ನೋಡಲು ಸಿಕ್ಕಿರುವುದಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ಪೋಲಿಸರಿಗೆ ಮಾಹಿತಿ ನೀಡಿದ್ದು ಅವರು ಸ್ಥಳಕ್ಕೆ ಬಂದು ವಿಚಾರಣೆ ಮಾಡಿದರು ಎಂದರೆ ಸರಿಯಲ್ಲ. ರಾತ್ರಿ ವೇಳೆಯಲ್ಲಿ ಯಾರೋ ಕಳ್ಳರು ಬಂದು ಅಂಗಡಿ ಮೇಲೆ ಹಾಕಿದ ಟಿನ್ ಶೆಡ್ ನ ಬೀಗವನ್ನು ತೆಗೆದು ಒಳಗಡೆ ಬಂದು ರೂ 8 ಸಾವಿರ ನಗದು ಹಣವನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಮೇಲೆ ಓದಿ ಹೇಳಿದಂತೆ ಪೋಲಿಸರಿಗೆ ದೂರು ಕೊಟ್ಟಿದ್ದೆನೆಂದರೆ ಸರಿಯಲ್ಲ.

ದಿನಾಂಕ: 15-11-2024 ರಂದು ಮಧ್ಯಾಹ್ನ 3-00 ರಿಂದ 4-00 ಗಂಟೆಗೆಯವರೆಗೆ ನಾನು ತೋರಿಸಿದ ಸ್ಥಳದಲ್ಲಿ ಪೋಲಿಸರು ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಮಾಡಿದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ 01 ಛಾಯಾ ಚಿತ್ರಗಳನ್ನು ತೆಗೆಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ದಿನಾಂಕ: 15-11-2024 ರಂದು ಕಳ್ಳತನ ಮಾಡಿಕೊಂಡು ಹೋದ ವ್ಯಕ್ತಿಯನ್ನು ತೋರಿಸಿ ಗುರುತಿಸಿರುತ್ತೇನೆಂದರೆ ಸರಿಯಲ್ಲ. ಆ ಸಮಯದಲ್ಲಿ 01 ಛಾಯಾ ಚಿತ್ರಗಳನ್ನು ತೆಗೆಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪುರವಣಿ ಹೇಳಿಕೆಯನ್ನು ನಿ ಪಿ 5 ಎಂದು ಗುರುತಿಸಲಾಯಿತು. ಈಗ ನಾವು ಮತ್ತು

ಆರೋಪಿ ರಾಜಿ ಮಾಡಿಕೊಂಡಿದ್ದೇವೆಂದರೆ ಸರಿ. ಆ ಕಾರಣದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:**

ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ